**ಆರ್.ಎ. ನಂ. 87/2023**
**ಎ.ಡಬ್ಲ್ಯು 01**

**ಸಾಕ್ಷಿಯನ್ನು ಇಂದು ದಿಃ 21.09.2024 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ ನಂ.1 ರವರ ಪರ ಶ್ರೀ ಎಂ.ಎಸ್.ಆರ್., ವಕೀಲರಿಂದ**

1) ನನಗೆ ಇಬ್ಬರು ಗಂಡುಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳು ಇರುತ್ತಾರೆ. ಅವರೆಂದರೆ ಶಿವಾನಂದ, ಚಂದ್ರಕಾಂತ, ಅನ್ನಪೂರ್ಣ ಮತ್ತು ಶರಣಮ್ಮ ಇರುತ್ತಾರೆ. ನಾನು ನನ್ನ ಗಂಡು ಮಕ್ಕಳ ಜೊತೆ ವಾಸವಾಗಿದ್ದೇನೆ. ಶರಣಮ್ಮ ಇವಳು ನನ್ನ ಜೊತೆ ವಾಸವಾಗಿದ್ದಾಳೆ. ನನ್ನ ಮಕ್ಕಳು ಆರೋಗ್ಯವಾಗಿ ಸದೃಢರಾಗಿರುತ್ತಾರೆ ಎಂದರೆ ನಿಜ. ಎದುರುದಾರ ನಂ.4 ಶಿವಾನಂದ ಸ್ವಲ್ಪ ಕಲಿತಿದ್ದಾನೆ. ಎದುರುದಾರ ನಂ.5 ಚಂದ್ರಕಾಂತ ಬಹಳ ಓದಿಕೊಂಡಿದ್ದಾನೆ. ಆತನು ಕಾಂಟ್ರಾಕ್ಟರ ಕೆಲಸ ಮಾಡುತ್ತಾನೆ.

2) ಚನ್ನಮ್ಮ ಮತ್ತು ಆಕೆಯ ಮಕ್ಕಳು ಸಿಂದಗಿ ನ್ಯಾಯಾಲಯದಲ್ಲಿ ಕೇಸ್ ಹಾಕಿದ ವಿಷಯ ನನಗೆ ಮತ್ತು ನನ್ನ ಮಕ್ಕಳಿಗೆ ಗೊತ್ತಿತ್ತು. ಚನ್ನಮ್ಮ ಮತ್ತು ಆಕೆಯ ಅಕ್ಕತಂಗಿಯರು ಪರಿಹಾರ ಹಣದಲ್ಲಿ ಪಾಲು ಬೇಕೆಂದು ಕೇಸು ಹಾಕಿದ ವಿಷಯ ಗೊತ್ತಿರುತ್ತದೆ. ಸದರಿ ಪ್ರಕರಣ ಅವರ ಪರವಾಗಿ ತೀರ್ಮಾನವಾಗಿದ್ದು ನನಗೆ ಗೊತ್ತಿರುತ್ತದೆ ಎಂದರೆ ನಿಜ. ಸನ್ 2011 ರಲ್ಲಿ ಸದರಿ ಪ್ರಕರಣ ತೀರ್ಮಾನವಾಗಿದ್ದು, ಅದರ ವಿರುದ್ಧ ವಿಜಯಪುರ ನ್ಯಾಯಾಲಯದಲ್ಲಿ ಆರ್.ಎ. ನಂ.130/2012 ನ್ನು ದಾಖಲಿಸಿರುತ್ತೇವೆ ಎಂದರೆ ನಿಜ. ಸದರಿ ಪ್ರಕರಣವು ರಿಮ್ಯಾಂಡ ಆಗಿರುತ್ತದೆ ಎಂದರೆ ನಿಜ. ಆ ಪ್ರಕರಣದಲ್ಲಿ ಮೇಲ್ಮನವಿ ನ್ಯಾಯಾಲಯವು ಪ್ರಕರಣವನ್ನು ರಿಮ್ಯಾಂಡ ಮಾಡಿ ನಾವೇ ಸಿಂದಗಿ ನ್ಯಾಯಾಲಯಕ್ಕೆ ಹೋಗಿ ಹಾಜರಾಗುವಂತೆ ನಿರ್ದೇಶನ ಕೊಟ್ಟಿರುತ್ತಾರೆ ಎಂದರೆ ನಿಜ.

3) ಸದರಿ ಪ್ರಕರಣ ರಿಮ್ಯಾಂಡ ಆದ ನಂತರ ಸಿಂದಗಿ ನ್ಯಾಯಾಲಯಕ್ಕೆ ನಾವು ಸ್ವತಃ ಹಾಜರಾಗದ ಕಾರಣ ಸಿಂದಗಿ ನ್ಯಾಯಾಲಯದವರು

ನ್ಯಾಯಾಲಯಕ್ಕೆ ಹಾಜರಾಗುವಂತೆ ಪುನಃ ನೋಟಿಸ್ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಕೊಟ್ಟಿರಬಹುದು, ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ನಮಗೆ ಸಾಕಷ್ಟು ಅವಕಾಶ ಕೊಟ್ಟರೂ ಕೂಡ ಉದ್ದೇಶಪೂರ್ವಕವಾಗಿ ಗೈರುಹಾಜರಾಗಿದ್ದೇನೆ ಎಂದರೆ ಸರಿಯಲ್ಲ.

4) ನನಗೆ 7-8 ವರ್ಷಗಳಿಂದ ಹೃದಯದ ಕಾಯಿಲೆ ಇರುತ್ತದೆ. ಈ ಬಗ್ಗೆ 7-8 ವರ್ಷಗಳ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಸನ್ 2019-20 ರ ನಂತರದ ದಾಖಲೆಗಳನ್ನು ಮಾತ್ರ ಹಾಜರುಪಡಿಸಿದ್ದೇನೆ ಹಾಗೂ ಅದಕ್ಕಿಂತ ಮುಂಚಿನ ದಾಖಲೆಗಳನ್ನು ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ಆರ್.ಎ.ನಂ. 130/2012 ರಲ್ಲಿ ಸಿಂದಗಿ ನ್ಯಾಯಾಲಯದ ಮುಂದೆ ಹಾಜರಾಗುವಂತೆ ನ್ಯಾಯಾಲಯದವರು ನಿರ್ದೇಶನ ಕೊಟ್ಟಿದ್ದರೂ ಕೂಡ ಮತ್ತು ಸದರಿ ವಿಷಯ ನನ್ನ ಗಮನದಲ್ಲಿದ್ದರೂ ಕೂಡ ಉದ್ದೇಶಪೂರ್ವಕವಾಗಿ ಸಿಂದಗಿ ನ್ಯಾಯಾಲಯದ ಮುಂದೆ ಹಾಜರಾಗಿಲ್ಲವೆಂದರೆ ಸರಿಯಲ್ಲ. ನನ್ನ ಮಕ್ಕಳು ಎದುರುದಾರ ನಂ.4 ರಿಂದ 7 ರವರು ತಾವು ಮೇಲ್ಮನವಿ ದಾಖಲು ಮಾಡದೇ ನನ್ನ ಕಡೆಯಿಂದ ಮೇಲ್ಮನವಿ ದಾಖಲು ಮಾಡಿಸಿ ಅನುಕಂಪವನ್ನು ಗಿಟ್ಟಿಸಿಕೊಳ್ಳಬೇಕೆಂದು ಬಯಸಿದ್ದಾರೆ ಎಂದರೆ ಸರಿಯಲ್ಲ.

5) ನನಗೆ ಯಾವುದೇ ಹೃದಯದ ಕಾಯಿಲೆ ಇರುವುದಿಲ್ಲ ಎಂದರೆ ಸರಿಯಲ್ಲ. ವೈದ್ಯರಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಆರ್.ಎ. ನಂ.130/2012 ರಲ್ಲಿ ಮೇಲ್ಮನವಿ ನ್ಯಾಯಾಲಯದವರು ಸಿಂದಗಿ ನ್ಯಾಯಾಲಯಕ್ಕೆ ಹೋಗಿ ಹಾಜರಾಗುವಂತೆ ನಿರ್ದೇಶನ ಕೊಟ್ಟಿದ್ದರೂ ಕೂಡ ಉದ್ದೇಶಪೂರ್ವಕವಾಗಿ ಏಕತರ್ಫಿಯಾಗಿರುತ್ತೇವೆ ಎಂದರೆ ಸರಿಯಲ್ಲ. ಓ.ಎಸ್.ನಂ.34/2008 ಇದು ನಿಕಾಲೆಯಾದ ವಿಷಯ ಎದುರುದಾರನು ಎಫ್.ಡಿ.ಪಿ. ಪ್ರಕರಣ ದಾಖಲಿಸಿದ ನಂತರ ಗೊತ್ತಾಗಿರುತ್ತದೆ ಎಂದರೆ ನಿಜ. ಆದರೂ ಕೂಡ ನಾನು ಉದ್ದೇಶಪೂರ್ವಕವಾಗಿ ಮೂರು ವರ್ಷ ಸುಮ್ಮನಿದ್ದೆ ಎಂದರೆ ಸಾಕ್ಷಿಯು ಆರಾಮ ಇರಲಿಲ್ಲವೆಂದು ನುಡಿಯುತ್ತಾರೆ. ನಾನು ಕೇವಲ ಆರಾಮ ಇಲ್ಲವೆಂದು ಹೇಳಿದ ಮಾತ್ರಕ್ಕೆ ನನ್ನ ಅರ್ಜಿಯನ್ನು ಮಾನ್ಯ

ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಕಥೆ ಕಟ್ಟಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

6) ಎದುರುದಾರ ನಂ.4 ರಿಂದ 7 ರವರು ನನ್ನನ್ನು ಪಾಲನೆ ಪೋಷಣೆ ಮಾಡುತ್ತಾರೆ ಎಂದರೆ ನಿಜ. ಈ ಪ್ರಕರಣವನ್ನು ನನ್ನ ಮಕ್ಕಳು ಹೇಳಿ ದಾಖಲು ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಕಾಲವಿಳಂಬವನ್ನು ಮನ್ನಾ ಮಾಡಲು ಸಕಾರಣಗಳನ್ನು ತೋರಿಸಿಲ್ಲವೆಂದರೆ ಸರಿಯಲ್ಲ. ನನಗೆ ಆರಾಮ ಇಲ್ಲ, ಆಸ್ಪತ್ರೆಯಲ್ಲಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿಯನ್ನು ಮಾನ್ಯ ಮಾಡಲಿಕ್ಕೆ ಬರುವುದಿಲ್ಲವೆಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣಪತ್ರ ಹಾಕಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ,

4 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ವಿಜಯಪುರ